# ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ

ಉದ್ಯಮಶೀಲತೆಯನ್ನು ಆಧಾರವಾಗಿಟ್ಟುಕೊಂಡು ನಮ್ಮ ರಾಜ್ಯದ ಯುವ ಜನತೆಯನ್ನು ಅಭ್ಯಸಿಸಲಾಗಿ, ಅವರೆಲ್ಲರ ಮೊದಲ ಆದ್ಯತೆ ನೌಕರಿಯನ್ನು ಮಾಡುವದೇ ಆಗಿರುತ್ತದೆ. ಉಳಿದಂತೆ ಸ್ವ-ಉದ್ಯೋಗಗಳನ್ನು ಪ್ರಾರಂಭಿಸಿದ ಉದ್ಯಮಶೀಲರನ್ನು ಅವಲೋಕಿಸಿದಾಗ ಕಂಡುಬಂದ ಅಂಶವೇನೆಂದರೆ ಅವರಲ್ಲಿ ಹೆಚ್ಚಿನವರು ನೌಕರಿ / ಉದ್ಯೋಗ ಸಿಗದೆ ಇರುವುದರಿಂದ ಬಲವಂತವಾಗಿ / ಅನಿವಾರ್ಯವಾಗಿ ಸ್ವ-ಉದ್ಯೋಗದತ್ತ ವಾಲಿರುವುದಾಗಿರುತ್ತದೆ. ಇದನ್ನೆ Forced Entrepreneurship ಎಂದು ಕರೆಯಲಾಗುತ್ತದೆ. ಈ ಹಿನ್ನಲೆಯಲ್ಲಿ ನಮ್ಮ ಯುವ ಜನತೆಯಲ್ಲಿ ಉದ್ಯಮಶೀಲತೆಯನ್ನು ಪ್ರಚೋದಿಸಿ ಅವರ ಮೊದಲ ಆದ್ಯತೆಯಾಗಿ ಉದ್ಯಮಶೀಲತೆಯತ್ತ ಪ್ರೇರೇಪಣೆಗೊಳಿಸುವುದು ಹಾಗೂ ಉದ್ಯಮಶಿಲರನ್ನಾಗಿ ಅಣಿಗೊಳಿಸುವುದು ಶಿಕ್ಷಣದ ಪ್ರಮುಖ ಅಂಶವಾಗಬೇಕಾಗಿದೆ.

ಕೇಂದ್ರ ಸರಕಾರದ 'ಆತ್ಮನಿರ್ಭರತೆ' ಘೋಷಣೆಯಂತೆ ಅಭಿವೃದ್ಧಿ ಹೊಂದಲು ಉದ್ಯಮಶೀಲತೆ ಪ್ರಮುಖ ಪಾತ್ರ ವಹಿಸುತ್ತದೆ ಅಲ್ಲದೆ ಸ್ವಾವಲಂಭನೆಯ ಬೆನ್ನೆಲಬು ಕೂಡ ಹೌದು. ಉದ್ಯಮಶೀಲತೆ ಹುಟ್ಟಿನಿಂದ ಮಾತ್ರವಲ್ಲ, ಶಿಕ್ಷಣ – ತರಬೇತಿ – ಬೆಂಬಲಸೇವೆ ಮೂಲಕ ಉದ್ಯಮಶೀಲರನ್ನು ಸೃಷ್ಠಿಸಬಹುದು ಎನ್ನುವ ತತ್ವದ ಮೇಲೆ ಸೂಕ್ತ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಶಿಸ್ತುಬದ್ಧ ಉದ್ಯಮಶೀಲತಾ ತರಬೇತಿ ಹಾಗೂ ಬೆಂಬಲ ಸೇವೆ ನೀಡಿದ್ದಲ್ಲಿ ಉದ್ಯಮಶೀಲ (ಉದ್ಯೋಗದಾತ)ರನ್ನು ಸೃಷ್ಠಿಸಬಹುದು. ಅಂತೆಯೇ ವೃತ್ತಿಪರತೆ ಹಾಗೂ ಸೂಕ್ತ ತರಬೇತಿಗಳಿಂದ ರಾಜ್ಯದ ಯುವಕ ಯುವತಿಯರನ್ನು ಉದ್ಯಮಶೀಲರನ್ನಾಗಿ ಮಾಡುವ ಮೂಲಕ ನಮ್ಮ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಮುನ್ನೆಡಸಬಹುದಾಗಿದೆ.

ಉದ್ಯಮಶೀಲತೆಯ ಅಭಿವೃದ್ಧಿಯನ್ನು ಈ ಕೆಳಗಿನಂತೆ ಮೂರು ವರ್ಗದ ವ್ಯಕ್ತಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಕಾರ್ಯಕ್ರಮ / ಯೋಜನೆಗಳನ್ನು ಹಮ್ಮಿಕೊಳ್ಳವದು ಸೂಕ್ತವಾಗಿರುತ್ತದೆ.

1) ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನೂ ಸೇರಿದಂತೆ ಅಕುಶಲ ಮಾನವ ಸಂಪನ್ಮೂಲ ಗುಂಪುಗಳಿಗಾಗಿ ಉದ್ಯಮಶೀಲತಾ ಪ್ರೇರೇಪಣಾ ಕಾರ್ಯಕ್ರಮಗಳು.

2) ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯರಿಗೆ ಅವಶ್ಯಕ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು.

3) ಸ್ವ-ಉದ್ಯೋಗ / ಉದ್ಯಮ ಸ್ಥಾಪಿಸಲು ಮುಂದೆ ಬರುವ ಹಾಗೂ ಬಯಸುವ ಆಸಕ್ತರಿಗೆ ಬೆಂಬಲ ಸೇವೆ / ಸಹಾಯ ಹಸ್ತ ನೀಡುವುದು.

ಸಂವಿಧಾನ ಶಿಲ್ಪಿ ಹಾಗೂ ದಾರ್ಶನಿಕ ಡಾ. ಬಿ.ಆರ್. ಅಂಬೇಡ್ಕರ, ಇವರ ಉಕ್ತಿಯಂತೆ ಸಮಾಜದಲ್ಲಿ ಬದಲಾವಣೆ ತರಲು **'ಅರಿವು – ಶಿಕ್ಷಣ – ಹೋರಾಟ'** ಅತೀ ಅವಶ್ಯ. ಅದರಂತೆ ನಮ್ಮ ಭಾವಿ ನಾಗರಿಕರಾದ ಇಂದಿನ ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಅರಿವು ಮೂಡಿಸಿ ಅವರನ್ನು ಭವಿಷ್ಯದ ಉದ್ಯಮಶೀಲರನ್ನಾಗಿ ಮಾಡಲು ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳವುದು ಅತೀ ಅವಶ್ಯವಾಗಿರುತ್ತದೆ. ಪದವಿ ವ್ಯಾಸಂಗದಲ್ಲಿರುವ ವಿದ್ಯಾರ್ಥಿಗಳ ಸೂಕ್ತ ಮನಸ್ಸುಗಳಲ್ಲಿ ಉದ್ಯಮಶೀಲತೆಯ ಬಗ್ಗೆ ಪ್ರಚೋದನೆಗೊಳಿಸಿ ಅವರಿಗೆ ಉದ್ಯಮಶೀಲತೆಯ ಹಂತಗಳ ಬಗ್ಗೆ ಅರಿವು ಮೂಡಿಸುವುದು ಈ

ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. ಪ್ರಸಕ್ತದಲ್ಲಿ ಬಹುತೇಕ ಎಲ್ಲ ವಿದ್ಯಾರ್ಥಿಗಳ ಗುರಿ ಒಂದು ಒಳ್ಳೆಯ ನೌಕರಿಯನ್ನು ಗಿಟ್ಟಿಸುವುದು ಆಗಿದ್ದು, ಅದರಿಂದ ಅವರನ್ನು ಉದ್ಯಮಶೀಲತೆ – ಸ್ವ-ಉದ್ಯೋಗದತ್ತ ಸೆಳೆಯುವುದು ಈ ಕಾರ್ಯಕ್ರಮದ ಆಶಯವಾಗಿದೆ.

ಪ್ರತಿ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮವು ಮೂರು ದಿನಗಳ ಅವಧಿಯಾಗಿದ್ದು, ಕಾರ್ಯಕ್ರಮದ ಭೋದನಾ ವಿಷಯಗಳು ಈ ಕೆಳಗಿನಂತಿವೆ.

1) ಉದ್ಯಮಶೀಲತೆ ಹಾಗೂ Start-up : ಪರಿಚಯ ಹಾಗೂ ಹಿನ್ನೆಲೆ
2) Charms of being an Entrepreneur - ಉದ್ಯಮಶೀಲನಾಗುವಲ್ಲಿಯ ಮಹತ್ವ ಹಾಗೂ ಆಕರ್ಷಣೆ
3) Competencies of an entrepreneur - ಉದ್ಯಮಶೀಲನ ಸಕ್ಷಮತೆ / ಸಾಮರ್ಥ್ಯ
4) Roadmap for setting up an Enterprise - ಉದ್ಯಮ ಸ್ಥಾಪನೆಗೆ ಅನುಸರಿಸಬೇಕಾದ ಕ್ರಮಗಳು
5) ಉದ್ಯಮಗಳ ಪ್ರಕಾರಗಳು, ಉದ್ಯಮ ಆಯ್ಕೆ ವಿಧಾನ, ಉದ್ಯಮ ಸ್ಥಾಪನೆಯ ಅವಕಾಶಗಳು ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ಇತ್ಯಾದಿ
6) ವಿವಿಧ ಸರ್ಕಾರಿ ಇಲಾಖೆ / ಸಂಸ್ಥೆಗಳಿಂದ ಉದ್ಯಮ ಸ್ಥಾಪನೆಗೆ ದೊರಕುವ ಬೆಂಬಲ.
7) ಯಶಸ್ವಿ ಉದ್ಯಮಶೀಲರಿಂದ ಅನುಭವ ಹಂಚುವಿಕೆ.
   (ವೇಳಾ ಪಟ್ಟಿಯ ಪ್ರತಿಯನ್ನು ಈ ಕೆಳಗೆ ಲಗತ್ತಿಸಿದೆ).

ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿ ಹಾಗೂ ಕೌಶಲ್ಯಗಳನ್ನು ಬಯಸಿದಲ್ಲಿ ಅವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ಮುಂದಿನ ಹಂತದ ತರಬೇತಿಗಳನ್ನು ನೀಡಲು ಸಿಡಾಕ್ ಸಂಸ್ಥೆಯು ಕ್ರಮ ವಹಿಸುತ್ತದೆ.

## ವೇಳಾಪಟ್ಟಿ

## ಉದ್ಯಮಶೀಲತಾ ಪ್ರೇರೇಪಣಾ ಶಿಬಿರ ಕಾರ್ಯಕ್ರಮ

| ದಿನ | ಅವಧಿ | ವಿಷಯ |
|---|---|---|
| 1 | | ಉದ್ಘಾಟನೆ |
| | I | ಉದ್ಯಮಶೀಲತೆ, Start-up ಕುರಿತು ಪರಿಚಯ ಹಾಗೂ ಹಿನ್ನೆಲೆ |
| | II | Charms of being an Entrepreneur - ಉದ್ಯಮಶೀಲನಾಗುವಲ್ಲಿಯ ಮಹತ್ವ ಹಾಗೂ ಆಕರ್ಷಣೆ |
| | III | Competencies of an entrepreneur - ಉದ್ಯಮಶೀಲನ ಸಕ್ಷಮತೆ / ಸಾಮರ್ಥ್ಯ |
| | IV | Competencies of an entrepreneur - ಉದ್ಯಮಶೀಲನ ಸಕ್ಷಮತೆ / ಸಾಮರ್ಥ್ಯ |

| ದಿನ | ಅವಧಿ | ವಿಷಯ |
|---|---|---|
| 2 | I | ಉದ್ಯಮಗಳ ಪ್ರಕಾರಗಳು ಹಾಗೂ Roadmap for setting up an Enterprise - ಉದ್ಯಮ ಸ್ಥಾಪನೆಗೆ ಅನುಸರಿಸಬೇಕಾದ ಕ್ರಮಗಳು |
| | II | ಉದ್ಯಮಗಳ ಆಯ್ಕೆ ವಿಧಾನ |
| | III | ಉದ್ಯಮ ಸ್ಥಾಪನೆಯ ಅವಕಾಶಗಳು |
| | IV | ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ |
| 3 | I | ವಿವಿಧ ಸರ್ಕಾರಿ ಇಲಾಖೆ / ಸಂಸ್ಥೆಗಳಿಂದ ಉದ್ಯಮ ಸ್ಥಾಪನೆಗೆ ದೊರಕುವ ಬೆಂಬಲ. |
| | II | ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳಿಂದ ಉದ್ಯಮಗಳ ಸ್ಥಾಪನೆಗೆ ದೊರಕುವ ನೆರವು. |
| | III | ಯಶಸ್ವಿ ಉದ್ಯಮಶೀಲರಿಂದ ಅನುಭವ ಹಂಚುವಿಕೆ. |
| | IV | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ಯೋಜನೆಗಳ ಪರಿಚಯ ಹಾಗೂ ಮೌಲ್ಯಮಾಪನ |
| | | ಸಮಾರೋಪ |